
ಯಾವಾಗಲೋ ಒಮ್ಮೆ ಬಂದುಹೋಗುವ ಸಂಬಂಧವನ್ನು ಮಾತ್ರ ಹೊಂದಿರುತ್ತಾರೆ.

ಒಂದು ಒಣ ಸಮಾಜಶಾಸ್ತ್ರೀಯ ಪಠ್ಯವಾಗುವ ಅಪಾಯದಿಂದ ಪಾರಾಗಿ ರಕ್ತಮಾಂಸಗಳಿಂದ ತುಂಬಿಕೊಂಡು ಜೀವಂತವಾಗಿರುವ ಈ ಕೃತಿ ಆತ್ಮಕಥಾ ಪ್ರಕಾರಕ್ಕೆ ಒಂದು ಹೊಸ ಆಯಾಮವನ್ನು ತಂದುಕೊಟ್ಟಿದೆ. ಮುಖ್ಯ ನಿರೂಪಕನ ಹೋರಾಟದ ಕಥನದೊಳಗೆ ಬರುವ ಇತರ ಅನೇಕ ವ್ಯಕ್ತಿಗಳ ದುಃಖದುಮ್ಮಾನಗಳ ಕಥನವನ್ನು, ಸಂಗೀತದ ಪರಿಭಾಷೆಯಲ್ಲಿ ಹೇಳುವುದಾದರೆ 'ಸೋಲೋ' ಅಲ್ಲದ ಸಮೂಹಗಾನವೆನ್ನಬಹುದು. ಹೆಚ್ಚಾಗಿ ದಾರುಣ ಹಾಗೂ ಕರುಣಾವಿಲಾಪವೇ ತುಂಬಿದ ಒಂದು ಸಂಗೀತ ಕಛೇರಿ! ಹಟ್ಟಿಯ ಸಮಸ್ಯೆಗಳ ಪರಿಹಾರಕ್ಕಾಗಿ ದೊರೈರಾಜ್ ಮತ್ತು ಗೆಳೆಯರು ಹುಟ್ಟುಹಾಕಿದ 'ದಲಿತ ಯುವಕ ಸಂಘ' ಮುಂದೆ ಕರ್ನಾಟಕದಲ್ಲಿ ಹುಟ್ಟಿಕೊಂಡ 'ದಲಿತ ಸಂಘರ್ಷ ಸಮಿತಿ'ಯಲ್ಲಿ ಲೀನವಾಗಿ ಹೋರಾಟವನ್ನು ಮುಂದುವರಿಸುವ ಒಂದು ಸುದೀರ್ಘ ಪಯಣ, ಹಟ್ಟಿಯ ಸಾಮೂಹಿಕ ಹೋರಾಟ ಕಂಡ ಸೋಲು-ಗೆಲುವುಗಳ ಚಿತ್ರಣ ಇಲ್ಲಿದೆ. ಈಚಿನ ದಶಕದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಎಲ್ಲರ ಒಳಗೊಳ್ಳುವಿಕೆ (ಇನ್‌ಕ್ಲೂಸಿವ್) ಇರಬೇಕೆಂಬ ಮಾತು ಹೆಚ್ಚುಹೆಚ್ಚು ಕೇಳಿಬರುತ್ತಿದೆ. ಆ ದೃಷ್ಟಿಯಿಂದ ಇದೊಂದು ಇನ್‌ಕ್ಲೂಸಿವ್ ಆಟೋಬಯಾಗ್ರಫಿ!

ಹಟ್ಟಿಯ 'ವ್ಯಕ್ತಿತ್ವ' ಅಥವಾ ಸಂರಚನೆಯೇ ಇನ್‌ಕ್ಲೂಸಿವ್ ಸ್ವರೂಪದಲ್ಲಿದೆ. ಇಲ್ಲಿನ ನಿವಾಸಿಗಳು ಕೇವಲ ಅಸ್ಪೃಶ್ಯರಷ್ಟೇ ಅಲ್ಲದೆ, ತಿಗಳರು ಮುಂತಾದ ವಿವಿಧ ಪಂಗಡಗಳಿಂದ ಮತ್ತು ವಿವಿಧ ಪಾರಂಪರಿಕ ಕಸುಬುಗಳನ್ನು ಮಾಡುವ ಕುಟುಂಬಗಳಿಂದ ಕೂಡಿದೆ. ದೊರೈರಾಜ್ ಆರಂಭದ ಹಲವು ಭಾಗಗಳಲ್ಲಿ ಪ್ರಸ್ತಾಪಿಸಿರುವ ಅಂಥ ವಿವರಗಳನ್ನು ಓದುತ್ತಿರುವಾಗ ನನಗೆ ಸಿದ್ಧಲಿಂಗಯ್ಯನವರ 'ನನ್ನ ಜನಗಳು' ಕವಿತೆ ಮತ್ತು ಹನ್ನೆರಡನೆಯ ಶತಮಾನದ ಶರಣ ಸಮಾಜ ಒಟ್ಟೊಟ್ಟಿಗೆ ನೆನಪಾದವು. ಕೆರೆ ಹಿಂದಿನ ಮಣ್ಣಿನಲ್ಲಿ ಇಟ್ಟಿಗೆ ಹಾಕುವುದು, ಬಿಲ್ಲೆ, ತಾರಸಿ ಮಾಡುವುದು (ಸೈಜುಗಲ್ಲು ಹೊತ್ತೋರು), ಹೆಂಗಸರು ಬೆಟ್ಟದಿಂದ ಸೌದೆ ತಂದು ಮಾರುವುದು (ಮೋಳಿಗೆ ಮಾರಯ್ಯ),




ನಮ್ಮ ಹಟ್ಟಿ (ಒಂದು ಹಟ್ಟಿಯ ಆತ್ಮಕಥಾನಕ)
ಲೇ: ಕೆ. ದೊರೈರಾಜ್
ನಿರೂಪಣೆ: ಜಿ.ವಿ. ಆನಂದಮೂರ್ತಿ
ಪು: 212; ಬೆ: ರೂ. 235
ಪ್ರಕಾಶಕರು: ಪ್ರತಿಪದ ಪ್ರಕಾಶನ, ತುಮಕೂರು.
ಮೊಬೈಲ್: 94482 28624.

ದೋಸೆ ಮಾರುವುದು, ಮಂಡಿಪೇಟೆಯ ಹಮಾಲಿ ಕೆಲಸ, ಮಂಡಿಗಳಲ್ಲಿ ಸೋರಿ ಚೆಲ್ಲಿಕೊಂಡ ಕಾಳು ಧಾನ್ಯಗಳನ್ನು ಆರಿಸಿ ತರುವುದು (ಶರಣರ ಕಾಲದ ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ) ಚಪ್ಪಲಿ ಹೊಲಿಯುವುದು (ಬೂಟುಮೆಟ್ಟು ಹೊಲೆದೋರು), ಮರಗೆಲಸ, ಕುಲುಮೆ ಕೆಲಸ, ಕೃಷಿ - ಇವೆಲ್ಲವುಗಳ ಜೊತೆಗೆ ಹಾರ್ಮೋನಿಯಂ, ತಬಲ ರಿಪೇರಿ ಕೆಲಸದವರೆಗೂ ವಿಸ್ತರಿಸಿಕೊಂಡಿದೆ. ಕ್ಷೌರಿಕರು ಹಟ್ಟಿಗೆ ಬಾರದಿದ್ದುದರಿಂದ ಹಟ್ಟಿಯ ಒಂದಿಬ್ಬರು ಕ್ಷೌರಿಕ ವೃತ್ತಿಯನ್ನು (ಹಡಪದ ಅಪ್ಪಣ್ಣ) ಕಲಿಯುತ್ತಾರೆ. ಈ ವಿವರಗಳು ಹನ್ನೆರಡನೆಯ ಶತಮಾನದ ಒಂದು ಮಿನಿ ಕಾಯಕ ಕೇಂದ್ರವೆಂಬ ಭಾವನೆಯನ್ನು ಮೂಡಿಸುತ್ತದೆ. ವಿವಿಧ ಪಾರಂಪರಿಕ ವೃತ್ತಿಗಳಲ್ಲಿ